# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 19 (174) |
| 2. | ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| 3. | ಉತ್ತರಿಸುವ ದಿನಾಂಕ | : | 05.12.2023 |
| 4. | ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಸರ್ವೆ ನಂ: 135/1 ರಲ್ಲಿ 0.20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮೆಟ್ರೋ ಕಾಮಗಾರಿಗೆ ಒಳಪಟ್ಟಿರುವ ಹಿನ್ನಲೆಯಲ್ಲಿ ಬಿ.ಡಿ.ಎ. ದಿಂದ ಕೆ.ಐ.ಎ.ಡಿ.ಬಿ.ಗೆ ಎನ್.ಓ.ಸಿ. ನೀಡಲಾಗಿದೆಯೇ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಸರ್ವೆ ನಂ: 135/1 ರಲ್ಲಿ ಒಟ್ಟು 32 ಗುಂಟೆ ವಿಸ್ತೀರ್ಣದ ಪೈಕಿ 0-20 ಗುಂಟೆ ಜಮೀನನ್ನು ಅರ್ಕಾವತಿ ಬಡಾವಣೆ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಲು ದಿನಾಂಕ: 03.02.2003 ರಂದು ಪ್ರಾಥಮಿಕ ಅಧಿಸೂಚನೆ ಮತ್ತು ದಿನಾಂಕ: 23.02.2004 ರಂದು ಅಂತಿಮ ಅಧಿಸೂಚನೆ ಹೊರಡಿಸಿರುತ್ತದೆ ಮತ್ತು ಸದರಿ ಜಮೀನಿನಲ್ಲಿ ಮನೆಗಳು ನಿರ್ಮಾಣವಾಗಿದ್ದ ಕಾರಣ 12 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುತ್ತದೆ.<br><br>ನಾಗವಾರ ಗ್ರಾಮದ ಸರ್ವೆ ನಂ: 135/1 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟ 12 ಗುಂಟೆ ಜಮೀನಿನಲ್ಲಿ 1001 ಚ.ಮೀ. ಹಾಗೂ ಅರ್ಕಾವತಿ ಬಡಾವಣೆ ಉದ್ದೇಶಕ್ಕಾಗಿ ಅಧಿಸೂಚನೆ ಹೊರಡಿಸಿದ 20 ಗುಂಟೆ ವಿಸ್ತೀರ್ಣದಲ್ಲಿ 347.17 ಚ.ಮೀ. ವಿಸ್ತೀರ್ಣವನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ: 17.01.2019 ರಂದು ಕೆ.ಐ.ಎ.ಡಿ.ಬಿ.ಯಿಂದ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.<br><br>ಕೆಐಎಡಿಬಿಗೆ ಬಿಡಿಎ ರವರಿಂದ ಬಂದಿರುವ ಪತ್ರ ಸಂಖ್ಯೆ: ದಿನಾಂಕ: 30.08.2020 ಹಾಗೂ 30.06.2023 ರ ಪತ್ರಗಳಲ್ಲಿ ನಾಗವಾರ ಗ್ರಾಮದ ಸರ್ವೆ ನಂ. 135/1 ರಲ್ಲಿನ 0-32 ಗುಂಟೆ ಪೈಕಿ 0-20 ಗುಂಟೆ ಜಮೀನನ್ನು ಅರ್ಕಾವತಿ ಬಡಾವಣೆಗೆ ದಿನಾಂಕ:03.02.2003 ರಂತೆ ಪ್ರಾಥಮಿಕ ಅಧಿಸೂಚನೆಯಾಗಿದ್ದು, ನಂತರ ದಿನಾಂಕ:23.02.2004 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ದಿನಾಂಕ:14-09-2004 ರಂದು ಐತೀರ್ಪು ಅನುಮೋದನೆಯಾಗಿದ್ದು, ದಿನಾಂಕ:06.11.2004 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ. ಭೂ ಪರಿಹಾರವನ್ನು ಯಾರಿಗೂ ಪಾವತಿಸಿರುವುದಿಲ್ಲ ಎಂದು ಬಿಡಿಎ ಯು ತಿಳಿಸಿರುತ್ತದೆ.<br><br>ದಿನಾಂಕ: 24.10.2019 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಬಿ.ಎಂ.ಆರ್.ಸಿ.ಎಲ್. ಯೋಜನೆಯ ಭೂಸ್ವಾಧೀನ |
| (ಆ) | ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಭೂಮಾಲೀಕರೊಂದಿಗೆ ಶಾಮೀಲಾಗಿ ಭೂಮಾಲೀಕರಿಗೆ ನಿಯಮ ಬಾಹಿರವಾಗಿ ಕೆ.ಐ.ಎ.ಡಿ.ಬಿ. ಯಿಂದ ಕೋಟ್ಯಾಂತರ ರೂಪಾಯಿಗಳ ಪರಿಹಾರ ಧನ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| (ಇ) | ಸದರಿ ಅಕ್ರಮದಲ್ಲಿ ಭಾಗಿಯಾಗಿರುವ ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಮತ್ತು ಕಾನೂನು ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | |
| (ಈ) | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಐ.ಎ.ಡಿ.ಬಿ. ಅಧಿಕಾರಿಯವರು ಸೂಕ್ತ ಸರ್ವೆ ಮಾಡದೆ ಬಿ.ಡಿ.ಎ. ಸ್ವತ್ತಿಗೆ ಖಾಸಗಿ ವ್ಯಕ್ತಿಗಳ ಸ್ವತ್ತೆಂದು ಅಕ್ರಮವಾಗಿ ಭೂಮಾಲೀಕರೊಂದಿಗೆ ಶಾಮೀಲಾಗಿ, ಭೂಮಾಲೀಕರಿಗೆ ಪರಿಹಾರಧನವನ್ನು ನೀಡಿದ್ದು, ಈ ಸಂಬಂಧ ಹಲವಾರು ಬಾರಿ ಸದನದಲ್ಲಿ ಪ್ರಸ್ತಾಪಿಸಲಾಗಿದ್ದು, ಪದೇ ಪದೇ ಗೊಂದಲಯುಕ್ತ ತಪ್ಪು ಮಾಹಿತಿ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಇದುವರೆಗೂ ಸರ್ಕಾರ ಕೈಗೊಂಡ ಕ್ರಮಗಳೇನು; | |
| (ಉ) | ಸದರಿ ಜಮೀನಿಗೆ ಸಂಬಂಧಿಸಿದಂತೆ ಮರು ಸರ್ವೆ ಮಾಡಿಸಿ, ಈಗಾಗಲೇ ಭೂಮಾಲೀಕರಿಗೆ ಅಕ್ರಮವಾಗಿ ನೀಡಿರುವ ಪರಿಹಾರ ಧನವನ್ನು ಹಿಂಪಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | |

ಪ್ರಕ್ರಿಯೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಸ್ವತ್ತಿಗೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸದೇ ಇರುವ ಕಾರಣ, ಬಿ.ಎಂ.ಆರ್.ಸಿ.ಎಲ್. ಸಂಸ್ಥೆಯು ಪರಿಹಾರ ಪಾವತಿಸಬಹುದು ಎಂದು ಜಿಲ್ಲಾಧಿಕಾರಿ (ಭೂಸ್ವಾಧೀನ) ಬಿ.ಡಿ.ಎ. ಇವರು ತಿಳಿಸಿದ್ದು, ಈ ವಿಷಯದ ಕುರಿತು ಸುದೀರ್ಘ ಚರ್ಚೆಯ ನಂತರ ಈ ಪ್ರಕರಣದಲ್ಲಿ ಘಟತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಸೂಕ್ತ ಸ್ಪಷ್ಟೀಕರಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿತ್ತು.

ಅದರಂತೆ, ಸಿ.ಇ.ಓ. & ಇ.ಎಂ., ಕೆ.ಐ.ಎ.ಡಿ.ಬಿ. ರವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯ ಕುರಿತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿ, ಕಾನೂನು ಇಲಾಖೆಯು ದಿನಾಂಕ: 07.11.2021 ರಲ್ಲಿ ನೀಡಿರುವ ಅಭಿಪ್ರಾಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಭೂಸ್ವಾಧೀನವಾದ ಸ್ವತ್ತಿಗೆ ಸಂಬಂಧಿಸಿದಂತೆ Right to fair compensation and Transparency in Land Acquisition, Rehabilitation and Resettlement Act 2013 ಕಾಯ್ದೆ ಪ್ರಕರಣ 24(2) ನೇರವಾಗಿ ಅನ್ವಯವಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ Lapsed ಎಂದು ಪರಿಗಣಿಸಬೇಕಾಗುತ್ತದೆ ಮತ್ತು ಪ್ರಾಧಿಕಾರವು ಅಭಿಪ್ರಾಯಪಟ್ಟಂತೆ ಬಿ.ಎಂ.ಆರ್.ಸಿ.ಎಲ್.ಸಂಸ್ಥೆಯು ಪರಿಹಾರ ಧನವನ್ನು ವಿತರಣೆ ಮಾಡಲು ಯಾವುದೇ ಬಾಧಕ ಇರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತದೆ.

ಈ ಹಿನ್ನಲೆಯಲ್ಲಿ ಕೆ.ಐ.ಎ.ಡಿ.ಬಿ.ಯು ಭೂಸ್ವಾಧೀನ ಪ್ರಾಧಿಕಾರವಾಗಿ ನಾಗವಾರ ಗ್ರಾಮದ ಸರ್ವೆ ನಂ: 135/1 ರ 0-20 ಗುಂಟೆ ಜಮೀನಿನಲ್ಲಿ 347.17 ಚ.ಮೀ. ವಿಸ್ತೀರ್ಣಕ್ಕೆ ಬಿ.ಎಂ.ಆರ್.ಸಿ.ಎಲ್. ಸಂಸ್ಥೆಯು ನೀಡಿದ ಪರಿಹಾರದ ಪ್ಯಾಕೇಜ್ ಮೊತ್ತವನ್ನು ಸಂಬಂಧಪಟ್ಟ ಭೂಮಾಲೀಕರಿಗೆ ಪರಿಹಾರ ಪಾವತಿಸಲಾಗಿದೆ.

ಕಾನೂನು ಇಲಾಖೆಯ ಅಭಿಪ್ರಾಯದಂತೆ ಅಧಿಸೂಚಿತ ಖಾತೆದಾರರಿಗೆ ಪರಿಹಾರ ವಿತರಿಸಿರುವುದರಿಂದ ಭೂಮಾಲೀಕರಿಂದ ಪರಿಹಾರ ಧನ ಹಿಂಪಡೆಯುವ ಹಾಗೂ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಸಂಖ್ಯೆ: ಸಿಐ 30 ಐಎಪಿ (ಇ) 2023

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು